# ದೇಸಿ ಪರದೇಸಿ

ನಾವು 'ದೇಸಿ'ಯಿಂದ ಬಹಳ ದೂರ ಬಂದುಬಿಟ್ಟಿದ್ದೇವೆ! ನಮ್ಮ ಬದುಕಿನ ಪ್ರತಿ ಉಸಿರಾಟ– ಜೀವನ ಶೈಲಿಗಳಲ್ಲಿ 'ಪರದೇಸಿ'ಗಳಾಗಿದ್ದೇವೆ. ಇದು ಸುಳ್ಳಲ್ಲ, ಕಟು ವಾಸ್ತವ. ಹಾಗೆಯೇ ಸುಮ್ಮನೆ ನಮ್ಮ ಸುತ್ತಮುತ್ತಲ ಆವರಣವನ್ನು ಅವಲೋಕಿಸಿದಾಗ ಅಲ್ಲೆಲ್ಲಾ ಪರದೇಸಿ ಸರಕುಗಳು ಅಥವಾ ಆ ವಾಸನೆಯ ವಸ್ತುಗಳು ನಮ್ಮ ಗಮನಕ್ಕೆ ಬರುತ್ತವೆ. ನಮ್ಮ ಅಡುಗೆ ಮನೆಯ ಸರಕುಗಳು, ನಾವು ಬಳಸುವ ಬೈಕು ಕಾರುಗಳು, ನಮ್ಮ ಬೆರಳ ತುದಿಯಿಂದ ಜಗತ್ತಿನ ಎಲ್ಲ ಮಾಹಿತಿಯನ್ನು ನಮ್ಮ ಕಣ್ಮುಂದೆ ಸಾಕ್ಷಾತ್ಕರಿಸುವ ಕಂಪ್ಯೂಟರ್, ನಮ್ಮ ಇಡೀ ಸಂಬಂಧಕ್ಕೆ ಹೊಸ ವ್ಯಾಖ್ಯಾನ ಬರೆಯುತ್ತಿರುವ ಮೊಬೈಲ್, ನಮ್ಮ ಮಕ್ಕಳು ಆಡುವ ಆಟಿಕೆಗಳು, ತಿನ್ನುವ ಪೆಪ್ಪರ್‌ಮೆಂಟ್ ಚಾಕೋಲೇಟ್‌ಗಳು, ನಾವು ಆಧುನಿಕರೆಂದು ಭ್ರಮಿಸಿಕೊಂಡು ಬೆಳಿಗ್ಗೆ ಸಂಜೆ ಕುಡಿಯುವ ಓಟ್ಸ್‌ನಂಥ ಗಂಜಿಗಳು, ಶೋಕಿಗೆಂದು ತಿನ್ನುವ ಡೇಟ್ಸ್‌ಗಳು... ಹೀಗೆ ನಾವು ಲೆಕ್ಕ ಹಾಕುತ್ತಾ ಬಂದರೆ ಪರದೇಸಿ ಮಾರುಕಟ್ಟೆ ಸಂಸ್ಕೃತಿಯ ಕಬಂಧ ಬಾಹುಗಳ ವ್ಯಾಪಕತೆ ಅರಿವಿಗೆ ಬರುತ್ತದೆ.

ನಮ್ಮ ಸಂಸ್ಕೃತಿಯ ಅಂಶಗಳನ್ನು ಪರದೇಸಿತ್ವ ನುಂಗಿ ನೀರು ಕುಡಿಯುತ್ತಿದೆ. ನಮ್ಮ ಗಂಡಸರೆಲ್ಲರೂ ಹೆಚ್ಚು ಕಡಿಮೆ ಪರದೇಸಿ ಪ್ಯಾಂಟು ಷರ್ಟುಗಳ ಕೇಶ ವಿನ್ಯಾಸದ ಜಾಡಿಗೆ ಬಂದುದಾಗಿದೆ. ಹೆಂಗಸರು– ಅದರಲ್ಲೂ ನಲ್ವತ್ತು ಐವತ್ತು ವರ್ಷಗಳ ಕೆಳಗಿನವರು ಸೀರೆಯನ್ನು ಬಿಟ್ಟು, ಪರದೇಸಿ ಉಡುಪು ಧರಿಸುವುದನ್ನು ಅಭ್ಯಾಸ ಮಾಡಿಕೊಂಡಾಗಿದೆ. ರಾತ್ರಿಯ ಹೊತ್ತಿನ ದಿರಿಸಾಗಿದ್ದ ನೈಟಿ ಹೆಚ್ಚುಕಡಿಮೆ ಸಾಮಾನ್ಯ ಉಡುಪಿನಂತೆ ಗ್ರಾಮೀಣ ಪ್ರದೇಶದಲ್ಲಿ ನಡೆದಾಡುತ್ತಿದೆ.

ದೇಸಿ ವಸ್ತುಗಳನ್ನು ಬಳಸಬೇಕೆಂಬುದು ಇಂದು ಒಂದು ಆದರ್ಶವಾಗಿದೆ; ಸಾಮಾಜಿಕ ಕಳಕಳಿಯ ಹೋರಾಟದ ಆಶಯವಾಗಿದೆ. ಆದರೆ ವಾಸ್ತವ ಬದುಕಿನಲ್ಲಿ ಪರದೇಸಿ ಸರಕುಗಳು ವ್ಯಾಮೋಹಕ್ಕಿಂತ ಮಿಗಿಲಾದ ಅನಿವಾರ್ಯ ಎನ್ನುವಷ್ಟರಮಟ್ಟಿಗೆ ಸೇರಿಹೋಗಿವೆ. ಅವುಗಳನ್ನು ನಿರಾಕರಿಸಿ ಬದುಕು ಮಾಡಲು ಅಸಾಧ್ಯವಾಗದಷ್ಟು ದೂರ ಭಾರತೀಯರ ಬದುಕು ಸಾಗಿ ಮುಂದೆ ಬಂದಿದೆ. ಕಂಪ್ಯೂಟರ್, ಟಿವಿ, ಮೊಬೈಲ್‌ಗಳಂಥ ಸಾಧನಗಳಿಲ್ಲದೆ ಇಂದಿನ ಜೀವನ ಒಂದು ಹೆಜ್ಜೆ ಇಡಲು ಅಸಮರ್ಥವಾಗಿದೆ. ಹಾಗೆ ಮುನ್ನಡೆಯುವುದು ಅಸಾಧ್ಯವೂ ಆಗಿದೆ. ಅದು ಚಲನಶೀಲತೆಯನ್ನು ಕುಂಠಿತಗೊಳಿಸಿಬಿಡುತ್ತದೆ.

ನಮ್ಮ ದಿನ ಬಳಕೆಯ ಸಾಮಾನ್ಯ ಸರಕುಗಳಿಂದ ಹಿಡಿದು ಐಷಾರಾಮಿ ವಸ್ತುಗಳನ್ನು ನಾವು ಪರದೇಶದಿಂದ ಆಮದು ಮಾಡಿಕೊಳ್ಳುತ್ತೇವೆ ಅಥವಾ ಆ ದೇಶದ ಕಂಪನಿಗಳೇ ನಮ್ಮಲ್ಲಿ ನಮ್ಮ ಕೂಲಿಕಾರರಿಂದ ಉತ್ಪಾದಿಸುವ ತಂತ್ರ ಕಂಡುಕೊಂಡು ಮಾರುಕಟ್ಟೆಯನ್ನು ನಿಯಂತ್ರಣಕ್ಕೆ ತೆಗೆದುಕೊಂಡಿವೆ. ಇಂದು ಭಾರತದಲ್ಲಿ ಆರ್ಥಿಕ ತುರ್ತುಸ್ಥಿತಿ ನಿರ್ಮಾಣ ಆಗುತ್ತಿರುವುದರಿಂದ 'ಆಮದು ಸರಕುಗಳನ್ನು ಬಳಸಬೇಡಿ, ಆದಷ್ಟು ದೇಸಿ ವಸ್ತುಗಳನ್ನು ಬಳಸಿರಿ' ಎಂದು ನಮ್ಮ ರಾಜಕೀಯ ಧುರೀಣರು ಕರೆ ನೀಡುತ್ತಿದ್ದಾರೆ. ಆದರೆ ನಾವು ಹಿಂದೆ ಹೋಗದಷ್ಟು ಬಹಳ ಮುಂದೆ ಬಂದುಬಿಟ್ಟಿದ್ದೇವೆ. ಭಾರತೀಯ ಸಾಂಪ್ರದಾಯಿಕ ಆಭರಣ ಸಾಧನವಾದ ಚಿನ್ನವನ್ನು ಸಹ ನಾವಿಂದು ಉತ್ಪಾದಿಸುತ್ತಿಲ್ಲ ಎಂಬ ಕಟು ಸತ್ಯವನ್ನು ಜೀರ್ಣಿಸಿಕೊಳ್ಳಬೇಕಿದೆ. ಪ್ರತಿ ಗ್ರಾಂ ಚಿನ್ನವು ಸಹ ನಮಗೆ ಆಮದು ಮಾರ್ಗದಲ್ಲೇ ಬರಬೇಕು!

ಕಾಲು ಶತಮಾನಗಳ ಹಿಂದೆ ಭಾರತಕ್ಕೆ ಜಾಗತೀಕರಣದ ದಿಡ್ಡಿ ಬಾಗಿಲನ್ನು ತೆರೆದು ಪರದೇಸಿ ಸರಕುಗಳ ರುಚಿಯನ್ನು ಭಾರತೀಯ ಗ್ರಾಹಕನಿಗೆ ಅಂಟಿಸುವ ಸಂದರ್ಭದಲ್ಲಿ ಭಾರತದ ಸಾಮಾಜಿಕ ಚಿಂತಕರು ಮತ್ತು ಗಾಂಧಿವಾದದಲ್ಲಿ ನಂಬಿಕೆಯಿಟ್ಟಿದ್ದ ಆರ್ಥಿಕ ತಜ್ಞರು ದೇಶದ ಹೊಸ ಆರ್ಥಿಕ ನೀತಿಯನ್ನು ವಿರೋಧಿಸಿದ್ದರು. ಇದರಿಂದಾಗಿ ಭವಿಷ್ಯತ್ತಿನಲ್ಲಿ ಭಾರತದ ಅರ್ಥ ವ್ಯವಸ್ಥೆಯ ಮೇಲೆ ದೊಡ್ಡ ಹೊಡೆತ ಬೀಳುವುದೆಂದು ಎಚ್ಚರಿಸಿದ್ದರು. ಆಗ ಅಂದಿನ ಆಧುನಿಕ ಉಬ್ಬರದಲ್ಲಿ ತೇಲುತ್ತಿದ್ದವರು ಅವರನ್ನು ಲೇವಡಿ ಮಾಡಿದ್ದರು. ಇಂದು ಅವರೇ 'ದೇಸಿ ಸರಕುಗಳನ್ನು ಬಳಸಿ; ದೇಶದ ಅರ್ಥ ವ್ಯವಸ್ಥೆಯನ್ನು ಉಳಿಸಿ' ಎಂದು ಕರೆ ನೀಡುತ್ತಿರುವುದು ವಿಪರ್ಯಾಸ!

ಪರದೇಸಿ ಮಾರುಕಟ್ಟೆಯ ವಿಷವರ್ತುಲದಲ್ಲಿ ಸಿಲುಕಿರುವ ನಾವಿಂದು ಬಹಳ ದೂರ ಬಂದುಬಿಟ್ಟಿದ್ದೇವೆ. ಆದರೆ ನಮಗೆ ನಮ್ಮ ದೇಶ ಮುಖ್ಯ, ನಮ್ಮ ಮಕ್ಕಳ ಭವಿಷ್ಯ ಮುಖ್ಯ ಅನ್ನಿಸುವುದಾದರೆ– ಗಾಂಧೀಜಿಯವರ ತತ್ವಸಿದ್ಧಾಂತದ ಕಡೆ ಪ್ರಾಮಾಣಿಕವಾಗಿ ಗಮನಹರಿಸಬೇಕಾಗಿದೆ.

■ ಶಿಕಾಕು

## ಮಾತೇ ಮುತ್ತು

★ ಎಲ್ಲರ ಆಸೆಗಳನ್ನು ಪೂರೈಸುವ ತಾಕತ್ತು ನಮ್ಮ ನಿಸರ್ಗಕ್ಕಿದೆ; ಎಲ್ಲರ ದುರಾಸೆಗಳನ್ನಲ್ಲ.

-ಮಹಾತ್ಮ ಗಾಂಧೀಜಿ

★ ಒಳ್ಳೆಯತನವನ್ನು ಕಂಡಾಗ ಅನುಕರಿಸಿ, ಕೆಟ್ಟದ್ದನ್ನು ಕಂಡಾಗ ಆತ್ಮ ಪರಿಶೀಲನೆ ಮಾಡಿಕೊಳ್ಳಬೇಕು.

-ಬೈಬಲ್

★ ಬೇರೆಯವರಿಗೆ ಉಪಕಾರ ಮಾಡಲು ಯಾರು ಮುಂದಾಗುತ್ತಾನೋ, ಅವನ ಹೃದಯದಲ್ಲಿ ಪ್ರೀತಿ– ಪ್ರೇಮದ ಬಾಗಿಲು ತೆರೆದಿರುತ್ತದೆ.

-ರವೀಂದ್ರನಾಥ ಠಾಕೂರ್

★ ಸಜ್ಜನರು ಕಾಯಾ, ವಾಚಾ, ಮನಸಾ ಬೇರೆಯವರಿಗೆ ಉಪಕಾರ ಮಾಡಲು ಮುಂದಾಗುತ್ತಾರೆ.

-ತುಲಸಿದಾಸ

★ ವಿಷವನ್ನು ಉಣಿಸಿದವರಿಗೆ ಷಡ್ರಸವನ್ನು ಉಣಿಸಬೇಕು. ದ್ವೇಷ ಮಾಡಿದವನನ್ನು ಪೋಷಿಸಬೇಕು. ಪುಸಿ ಮಾಡಿ ಕೆಡಿಸುವವನನ್ನು ಹಾಡಿ ಹೊಗಳಬೇಕು. ಮೋಸ ಮಾಡಿದವನ ಹೆಸರನ್ನು ಮಗನಿಗೆ ಇಡಬೇಕು.

-ಪುರಂದರದಾಸ

★ ಆಸೆ ಇಲ್ಲದವನಿಗೆ ಜಗತ್ತೇ ತೃಣ ಸಮಾನ.

-ಕಾಳಿದಾಸ

★ ನಿಷ್ಕಾಮ ಕರ್ಮ ಭಗವಂತನನ್ನು ಋಣಿಯಾಗಿಸುತ್ತದೆ. ಭಗವಂತ ಬಡ್ಡಿ ಸಹಿತ ಹಿಂದಿರುಗಿಸುವುದು ಅನಿವಾರ್ಯ ಆಗುತ್ತದೆ.

-ಸ್ವಾಮಿ ರಾಮತೀರ್ಥ

★ ಒಂದೇ ಕೈಯಲ್ಲಿ ಚಪ್ಪಾಳೆ ತಟ್ಟಲಾಗುವುದಿಲ್ಲ, ಹಾಗೆಯೇ ಉದ್ಯೋಗವನ್ನು ಮಾಡದೆ ಕರ್ಮವು ಫಲವನೀಯದು.

-ಮಹಾಭಾರತ

★ ಜ್ಞಾನಿಗಳಾದವರು ತಮ್ಮ ಕಷ್ಟ ನಿವಾರಣೆಗಾಗಿ ನಿರ್ಮಲರಾದ ಗೆಳೆಯರನ್ನು ಹೊಂದಬೇಕು. ಈ ಲೋಕದಲ್ಲಿ ಮಿತ್ರರಿಲ್ಲದ ಯಾವನೂ ಕಷ್ಟಗಳನ್ನು ದಾಟುವುದಿಲ್ಲ.

-ಭೋಜಚರಿತ್ರೆ

★ ಕ್ರಾಂತಿಕಾರಕ ಮಾತುಗಳಿಗೆ ಸರ್ಕಾರದಲ್ಲಿ ಬೆಲೆ ಸಿಕ್ಕುವಂತಾಗಬೇಕು. ಆಗಲೇ ಅದು ಸಾರ್ಥಕ ಬಂಡಾಯ.

-ಯು.ಆರ್.ಅನಂತಮೂರ್ತಿ

★ ಹನ್ನೆರಡನೆಯ ಶತಮಾನದಲ್ಲಿ 'ಕಾಯಕ'ವೇ 'ಪೂಜೆ'ಯಾಗಿತ್ತು. ಆದರೆ ಇಂದು 'ಪೂಜೆ'ಯೇ 'ಕಾಯಕ'ವಾಗುತ್ತಿದೆ!

-ಬಿ.ಟಿ.ಲಲಿತಾ ನಾಯಕ್

★ ಅಸಭ್ಯ ರಾಷ್ಟ್ರಗಳನ್ನು ಬಿಟ್ಟರೆ, ವಿಶ್ವದ ಉಳಿದ ರಾಷ್ಟ್ರಗಳಲ್ಲಿ ಪುಸ್ತಕಗಳದ್ದೇ ಆಡಳಿತವಿರುತ್ತದೆ.

-ವಾಲ್ಟೇರ್

★ ಯಾವುದೇ ಚರ್ಚೆಯಲ್ಲಿ ನಿನ್ನ ಮಾತು ಒಪ್ಪಿಗೆಯಾಗಬೇಕಾದರೆ, ನೀನು ಮಾತು ಮಾತಿಗೂ 'ನೀವು ಹೇಳಿದ್ದು ಸರಿ' ಎನ್ನುತ್ತಿರು!

-ಲಿನ್ ಯುಟಾಂಗ್

★ 'ಝರಿ' ತನ್ನೊಡನೆ ಬೇರೆ 'ಝರಿ'ಗಳನ್ನು ಸೇರಿಸಿಕೊಂಡು 'ನದಿ'ಯಾಗಿ ಹರಿಯುತ್ತದೆ. 'ನಿಂತ ನೀರು' ಕ್ರಿಮಿ, ಕೀಟಗಳನ್ನು ಮಾತ್ರ ತನ್ನೆಡೆಗೆ ಆಕರ್ಷಿಸಿ ಮತ್ತುಷ್ಟು 'ಕೊಳಚೆ'ಯಾಗುತ್ತದೆ.

-ಆ್ಯನಿಬೆಸೆಂಟ್

★ 'ಕೆಚ್ಚು' ಎಂಬ ಬಹುಮಾನವನ್ನು ನಿಮಗೆ ನೀವೇ ಕೊಟ್ಟುಕೊಳ್ಳಿ. ಉಳಿದವುಗಳೆಲ್ಲ ತಾವಾಗಿಯೇ ಬಂದು ನಿಮ್ಮನ್ನು ಸೇರುತ್ತವೆ.

-ನೆಪೋಲಿಯನ್